ರಾಜ್ಯದ ಎಲ್ಲಾ ಜಿಲ್ಲಾ ಕೈಗಾರಿಕಾ ಕೇಂದ್ರಗಳ ದೂರವಾಣಿ ಡಿಸ್ ಕನೆಕ್ಟ್

1076 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ ಕೈಗಾರಿಕಾ ಕೇಂದ್ರಗಳ ದೂರವಾಣಿ ಡಿಸ್ ಕನೆಕ್ಟ್ ಆಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದರ ಪರಿಹಾರಕ್ಕೆ ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರಾಜ್ಯ ಕೆಲವು ಜಿಲ್ಲಾ ಕೈಗಾರಿಕಾ ಕೇಂದ್ರಗಳ ದೂರವಾಣಿ ಡಿಸ್ ಕನೆಕ್ಟ್ ಆಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

ಆ) ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಒಟ್ಟು ರೂ.30 .00 ಲಕ್ಷ ಹೆಚ್ಚು ಹಣ ಕಛೇರಿ ವೆಚ್ಚಕ್ಕೆ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಇದನ್ನು ಪರಿಶೀಲಿಸಿ, ಸರ್ಕಾರವು ಒಟ್ಟು 10.00 ಲಕ್ಷ ರೂಪಾಯಿಗಳನ್ನು ದಿನಾಂಕ 19-2-1991ರಂದು ಬಿಡುಗಡೆ ಮಾಡಿದೆ. ಈ ಹಣವನ್ನು ನಿರ್ದೇಶಕರು ದಿನಾಂಕ 22-2-1991ರಂದು ಮರು ಹಂಚಿಕೆ ಮಾಡಿದ್ದಾರೆ. ಈಗ ಬಿಡುಗಡೆ ಮಾಡಿರುವ ಹಣದಿಂದ ದೂರವಾಣಿ ಕಡಿದು ಹೋಗಿರುವುದನ್ನು ಪುನಃ ಸಂಪರ್ಕಗೊಳಿಸಲು ಹಾಗೂ ಇತರೆ ಕಛೇರಿ ವಸ್ತುಗಳನ್ನು ಕೊಳ್ಳಲು ಸಾಧ್ಯವಾಗುವುದು.

ರಾಜ್ಯಕ್ಕೆ ಅಗತ್ಯವಿರುವ ವಿದ್ಯುತ್ ಪ್ರಮಾಣ

1086 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಪ್ರತಿದಿನ ಅಗತ್ಯವಿರುವ ವಿದ್ಯುತ್ತಿನ ಪ್ರಮಾಣ ಎಷ್ಟು?

ಆ) ಈಗ ರಾಜ್ಯದಲ್ಲಿ ಉತ್ಪಾದಿಸಲಾಗುತ್ತಿರುವ ಪ್ರಮಾಣವೆಷ್ಟು?

ಇ) ರಾಜ್ಯ ಎಷ್ಟು ಪ್ರಮಾಣದ ವಿದ್ಯುತ್ ಖೋತಾವನ್ನು ಎದುರಿಸುತ್ತಿದೆ?

ಈ) ಖೋತಾ ಇರುವ ವಿದ್ಯುತ್ತಿನ ಪ್ರಮಾಣವನ್ನು ಬೇರೆ ರಾಜ್ಯಗಳಿಂದ ಪಡೆಯಲಾಗುತ್ತಿದೆಯೇ?

ಉ) ಪಡೆಯಲಾಗುತ್ತಿದ್ದರೆ ಆ ರಾಜ್ಯಗಳು ಯಾವುವು?

ಊ) ಸರ್ಕಾರ ನೀಡಿರುವ ಆಹ್ವಾನದ ಮೇರೆಗೆ ಖಾಸಗಿ ವಲಯಗಳಿಂದ ವಿದ್ಯುತ್ ಉತ್ಪಾದನೆಯಲ್ಲಿ ಇದುವರೆವಿಗೂ ರಾಜ್ಯದಲ್ಲಿ ಯಾರಾದರೂ ಮುಂದೆ ಬಂದಿದ್ದಾರೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರಾಜ್ಯದಲ್ಲಿ ಈಗ ಅನಿರ್ಭಂದಿತ ವಿದ್ಯುತ್ ಬೇಡಿಕೆಯ ಪ್ರಮಾಣ ಸರಾಸರಿ ದಿನಂಪ್ರತಿ 56 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದೆ.

ಆ) ಈಗ ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ದಿನಂಪ್ರತಿ ಸರಾಸರಿ 39ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ ಅನ್ನು ಉತ್ಪಾದಿಸಲಾಗುತ್ತಿದೆ.

ಇ) ರಾಜ್ಯದಲ್ಲಿನ ವಿದ್ಯುತ್ ಖೋತಾ ಪ್ರಮಾಣ ಈಗ ದಿನವಹಿ 10 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದೆ.

ಈ) ಇಲ್ಲ.

ಉ) 'ಈ' ನಲ್ಲಿನ ಉತ್ತರದಿಂದ ಉದ್ಭವಿಸುವುದಿಲ್ಲ.